ಸರಕಾರದ ಸಾಲ ಕುರಿತು.

362 - ಶ್ರೀ ಬಿ. ಸತ್ಯನಾರಾಯಣ (ಶಿರಾ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *11.12.94 ರಂದು ಕರ್ನಾಟಕ ಸರ್ಕಾರ ಪಾವತಿ ಮಾಡಬೇಕಾಗಿದ್ದ ಸಾಲದ ಮೊತ್ತವೆಷ್ಟು? (ವಿವಿಧ ಇಲಾಖಾವಾರು ವಿವರಗಳನ್ನು ನೀಡುವುದು).*
2. *11.12.94 ರಿಂದ ಇದುವರೆವಿಗೆ ಸರ್ಕಾರ ಮರು ಪಾವತಿ ಮಾಡಿದ ಮೊತ್ತವೆಷ್ಟು? (ವಿವಿಧ ಇಲಾಖಾವಾರು ವಿವರಗಳನ್ನು ನೀಡುವುದು).*

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು :

1. ದಿನಾಂಕ : 30.11.94 ರಂದು ಕರ್ನಾಟಕ ಸರ್ಕಾರ ಪಾವತಿ ಮಾಡಬೇಕಾಗಿದ್ದ ಸಾಲದ ಮೊತ್ತ ರೂ. 6559.99 ಕೋಟಿ ರೂಪಾಯಿಗಳು.

2. ದಿನಾಂಕ : 1.12.94 ರಿಂದ 30.6.1995ರ ವರೆಗೆ ರಾಜ್ಯ ಸರ್ಕಾರ ಮರು ಪಾವತಿ ಮಾಡಿದ ಮೊತ್ತ ಮೊತ್ತ ರೂ. 528.77 ಕೋಟಿ ರೂಪಾಯಿಗಳು. (ಇಲಾಖಾವಾರು ಮಾಹಿತಿಯು ಸಧ್ಯ ಲಭ್ಯವಿರುವುದಿಲ್ಲ).

ಬಂಕಾಪುರಕ್ಕೆ ಹೊಸ ಸ್ವತಂತ್ರ ಪೋಲೀಸ್ ಸ್ಟೇಷನ್ ಕುರಿತು.

363 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96 ರಲ್ಲಿ ಹೊಸದಾಗಿ ಎಷ್ಟು ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಲಾಗುವುದು?*

ಆ) *ಯಾವ ಆಧಾರದ ಮೇಲೆ ಸದರಿ ಸ್ವತಂತ್ರ ಪೋಲೀಸ್ ಸ್ಟೇಷನ್‌ಗಳನ್ನು ಮಂಜೂರಿ ಮಾಡಲಾಗುವುದು?*

ಇ) *ಶಿಗ್ಗಾಂವ ತಾಲ್ಲೂಕ್ ಬಂಕಾಪುರಕ್ಕೆ ಹೊಸದಾಗಿ ಪೋಲೀಸ್ ಸ್ಟೇಷನ್ ಮಂಜೂರು ಮಾಡಲಾಗುವುದೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ-ಸಚಿವರು) :

ಅ) 1995-96 ನೇ ಸಾಲಿನಲ್ಲಿ 20 ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಲು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸ್ವತಂತ್ರ ಪೋಲೀಸ್ ಠಾಣೆಗಳನ್ನು ರಾಷ್ಟ್ರೀಯ ಪೋಲೀಸ್ ಆಯೋಗವು ಮಾಡಿರುವ ಶಿಫಾರಿಸ್ಸಿಗೆ ಅನುಗುಣವಾಗಿ ಮಾಡಲಾಗುತ್ತಿದೆ. ಈ ಶಿಫಾರಸ್ಸುಗಳು ಕೆಳಕಂಡಂತಿವೆ.

ಅ) ಒಂದು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಜನಸಂಖ್ಯೆ 60,000 ಇರಬೇಕು. ಈ ಸಂಖ್ಯೆ ಮೀರಿದಲ್ಲಿ ಈ ಠಾಣೆಯನ್ನು ವಿಭಜಿಸಿ ಹೊಸ ಠಾಣೆ ಪ್ರಾರಂಭಿಸಬಹುದು.

ಆ) ಒಂದು ಪೋಲೀಸ್ ಠಾಣಾ ವ್ಯಾಪ್ತಿಯು 150 ಚ.ಕಿ.ಮೀ. ಗಳಿಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿದ್ದಲ್ಲಿ ಅಲ್ಲಿ ಇನ್ನೊಂದು ಠಾಣೆ ಪ್ರಾರಂಭಿಸುವುದು.

ಇ) ಒಂದು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾರ್ಷಿಕ 700 ಅಪರಾಧ ಪ್ರಕರಣಗಳು ವರದಿಯಾದಲ್ಲಿ ಆ ಠಾಣೆಯನ್ನು ವಿಭಜಿಸಿ ಹೊಸ ಠಾಣೆ ಪ್ರಾರಂಭಿಸುವುದು.

ಮೇಲಿನ ಅಂಶಗಳಲ್ಲದೆ, ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಹಾಗೂ ಹಾಲಿ ಇರುವ ಪೋಲೀಸ್ ಠಾಣೆಯ ಮೇಲಿನ ಕೆಲಸದ ಒತ್ತಡ ಇವುಗಳನ್ನೆಲ್ಲ ಪರಿಶೀಲಿಸಿ, ಹೊಸ ಪೋಲೀಸ್ ಠಾಣೆ ತೆರೆಯುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತಿದೆ.

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ. ಅಲ್ಲಿ ಒಂದು ಹೊರ ಠಾಣೆ ಇದ್ದು, ಅದು ಸದ್ಯದ ಪರಿಸ್ಥಿತಿಯಲ್ಲಿ ಅವಶ್ಯಕತೆಗಳನ್ನು ಪೂರೈಸುತ್ತದೆ.

ಮಂಚನಬೆಲೆ ಜಲಾಶಯದ ಶಿಲ್ಪ ಗೇಟನಲ್ಲಿ ನೀರು ಪೋಲಾಗುತ್ತಿರುವುದು.

365 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಚನಬೆಲೆ ಜಲಾಶಯದ ಸಿಲ್ಪ ಗೇಟನಲ್ಲಿ ನೀರು ಸೋರಿ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ನೀರು ಸೋರುವಿಕೆ ಎಷ್ಟು ದಿನಗಳಿಂದ ಆಗುತ್ತಿದೆ. ಇದನ್ನು ಇಲ್ಲಿಯವರೆಗೆ ಸರಿಪಡಿಸದೇ ಇರಲು ಕಾರಣವೇನು;

ಇ) ಈ ರೀತಿ ಪೋಲಾಗುತ್ತಿರುವ ನೀರನ್ನು ನಿಲ್ಲಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) 1992 ರಿಂದ ಅಲ್ಪ ಪ್ರಮಾಣದ ನೀರು ಜಿನುಗುತ್ತಿದೆ. ಸರಿಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಇ) ಕೈಗೊಳ್ಳಲಾಗುವುದು.

ಸಣ್ಣ ನೀರಾವರಿ ಕೆರೆಗಳು

366 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಸಧ್ಯ ಚಾಲ್ತಿಯಲ್ಲಿರುವ ಸಣ್ಣ ನೀರಾವರಿ ಕೆಲಸಗಳು ಯಾವುವು, (ಗ್ರಾಮವಾರು ವಿವರ ಕೊಡುವುದು).